O.S. No. 222-2013
D.W. - 2

**<u>ದಿನಾಂಕಃ 11-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ. ಎ. ಜಿ., ಮಾನ್ಯ ವಕೀಲರಿಂದ 2,3,4,8 ಮತ್ತು 9 ನೇ ಪ್ರತಿವಾದಿಗಳ ಪರವಾಗಿಃ-</u>***

ಈ ದಿನ ನನ್ನ ಜೊತೆ ನ್ಯಾಯಾಲಯಕ್ಕೆ ವಾದಿ ಕೂಡ ಬಂದಿರುತ್ತಾರೆ. ಹಿಂದಿನ ಸಾರಿ ನನ್ನ ಪಾಟೀ ಸವಾಲು ಸಮಯದಲ್ಲಿ ಕೂಡ ಬಂದಿದ್ದರು ಎಂದರೆ ಸರಿ. ಹಿಂದಿನ ಸಾರಿ ವಾದಿ ನನ್ನ ಸಾಕ್ಷಿ ನಡೆದಾಗ ನ್ಯಾಯಾಲಯದಲ್ಲಿ ಕುಳಿತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಇಂಗ್ಲೀಷ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 12-11-1959 ರಲ್ಲಿ ವಿಭಾಗ ಆಗಿರುತ್ತದೆ ಅಂತಾ ನಾನು ಹೇಳಿ ಬರೆಸಿರುತ್ತೇನೆ. 1959 ರಲ್ಲಿ ಆದ ವಿಭಾಗಪತ್ರವನ್ನು ನಾನು ಎಲ್ಲಿಯು ಪ್ರಶ್ನಿಸಿರುವುದಿಲ್ಲ ನನ್ನ ತಾಯಿ ಮೃತ ಪ್ರತಿವಾದಿ ನಂಬರ 1 ಜೀವಂತ ಇರುವವರೆಗೂ ಮನೆಯ ಎಲ್ಲಾ ಜವಬ್ದಾರಿಯನ್ನು ಅವರೆ ನೋಡಿ ಕೊಳ್ಳುತ್ತಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ರಾಯಚೂರಿನಲ್ಲಿ ತನ್ನ ಮಕ್ಕಳ ಜೊತೆ ವಾಸವಾಗಿದ್ದರು ಎಂದರೆ ಸರಿ. ಪ್ರತಿವಾದಿ ನಂಬರ 3 ಮತ್ತು 4 ರಾಯಚೂರಿನಲ್ಲಿ ಇಂಜಿನೀಯರಿಂಗ್ ಓದಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂಬರ 3 ಮತ್ತು 4 ಇವರಿಗೆ ಮೃತ 1 ನೇ ಪ್ರತಿವಾದಿ ಓದಿಸಿರುತ್ತಾರೆ ಎಂದರೆ ಸರಿ. ನಾನು ಕರ್ನೂಲ್ ನಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಕರ್ನೂಲ್ ರಾಯಚೂರುನಿಂದ 100 ಕೀ ಮೀ ಅಂತರ ಇರುತ್ತದೆ ಎಂದರೆ ಸಾಕ್ಷಿದಾರರು 30 ಕೀ ಮಿ ಅಂತರ ಎಂದು ಹೇಳುತ್ತಾರೆ . ಪರತಿವಾದಿ ನಂಬರ 8 ರಾಯಚೂರಿನಿಂದ ಕರ್ನೂಲ್ ಗೆ ಸೈಕಲ ಮೇಲೆ ಒಂದು ಸಾರಿ ಬಂದಿದ್ದರು ಎಂದರೆ ಸರಿ. 8 ನೇ ಪ್ರತಿವಾದಿ ಮಾನಸಿಕ ರೋಗಿ ಆಗಿದ್ದರಿಂದ ಅವರ ಚಿಕಿತ್ಸೆ ನಡೆದಿತ್ತು ಎಂದರೆ ಸಾಕ್ಷಿದಾರರು 8 ನೇ ಪ್ರತಿವಾದಿ ತನ್ನ ತಂದೆ ಹೊಡೆದಿರುತ್ತಾರೆ ಅಂತಾ ಆತ

ಸೈಕೈಲ್ ಮೇಲೆ ಬಂದಿದ್ದ ಅಂತಾ ಹೇಳುತ್ತಾರೆ. 8 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ತಲೆಗೆ ಬ್ಯಾಟ್ ನಿಂದ ಹೊಡೆದಿದ್ದರು ಎಂದರೆ ಸಾಕ್ಷಿದಾರರು ಹಾಗೇ ಹೊಡೆದಿದ್ದರು ಅಂತಾ ನನಗೆ ಹೇಳಿರುತ್ತಾರೆ ಅಂತಾ ಹೇಳುತ್ತಾರೆ. 8 ನೇ ಪ್ರತಿವಾದಿಯನ್ನು ಪೋಲೀಸರು ಅರೆಸ್ಟ್ ಮಾಡಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನನಗೆ ಹಾಗೇ ಹೇಳಿದ್ದರು ಅಂತಾ ಹೇಳುತ್ತಾರೆ. 8 ನೇ ಪ್ರತಿವಾದಿಯನ್ನು ನ್ಯಾಯಾಲಯದಿಂದ ಮಾನಸಿಕ ಆಸ್ಪತ್ರೆಗೆ ಕಳುಹಿಸಿದ್ದರು ಎಂದರ ಸಾಕ್ಷಿದಾರರು ನನಗೆ ಹಾಗೇ ತಿಳಿದು ಬಂದಿದೆ ಅಂತಾ ಹೇಳುತ್ತಾರೆ. 8 ನೇ ಪ್ರತಿವಾದಿಯನ್ನು ಬೆಂಗಳೂರಿನ ನಿಮಾನ್ಸ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸಾಕ್ಷಿದಾರರು ಆ ಬಗ್ಗೆ ನನಗೆ ಮಾಹಿತಿ ಇದೆ ಅಂತಾ ಹೇಳುತ್ತಾರೆ. 8 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಹೊಡೆದ ನಂತರ ನಾನು 2 ನೇ ಪ್ರತಿವಾದಿಯನ್ನು ಭೇಟಿಯಾಗಿಲ್ಲ. 8 ನೇ ಪ್ರತಿವಾದಿಯು ಈಗಲೂ ಸಹಿತ ಚಿಕಿತ್ಸೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಈಗಲೂ ಚಿಕಿತ್ಸೆಯಲ್ಲಿದ್ದರು ಸಹಿತ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮದುವೆಗೆ ಮೊದಲು ದಾವ ಆಸ್ತಿ ಶೆಡ್ಯೂಲ್ 1 ರ ಆಸ್ತಿಯಲ್ಲಿ ವಾಸವಾಗಿದ್ದೆ. ಎಲ್ಲರೂ ಅಲ್ಲಿಯೇ ಇರುತ್ತಿದ್ದೇವು ಎಂದರೆ ಸರಿ. ಶೆಡ್ಯ್ಯಾಲ್ 1 ರ ಆಸ್ತಿಯ ಹಿಂದಿನ ಜಾಗೆ ಶೆಡ್ಯೂಲ್ 2 ರ ಆಸ್ತಿಯನ್ನು ನನ್ನ ತಾಯಿಯ ಹೆಸರಿಗೆ ಖರೀದಿಸಲಾಗಿದೆ ಎಂದರೆ ಸರಿ. ಸದರಿ ಶೆಡ್ಯೂಲ್ 2 ಆಸ್ತಿಯ ಬಗ್ಗೆ ಜಗಳ ಇದ್ದು ಆ ಬಗ್ಗೆ ಬೆಂಗಳೂರಿನಲ್ಲಿ ಪ್ರಕರಣ ನನ್ನ ತಾಯಿ ದಾಖಲಿಸಿದ್ದ ಅಂತಾ ಸಾಕ್ಷಿದಾರರು ಹೇಳುತ್ತಾರೆ. ಸದರಿ ಪ್ರಕರಣ ಯಾವಾಗ ದಾಖಲಾಗಿತ್ತು ನನಗೆ ನೆನಪಿಲ್ಲ. ಆ ಬಗ್ಗೆ ನನ್ನ ತಾಯಿ ಹೇಳಿರುತ್ತಾರೆ. ಬೆಂಗಳೂರಿನಲ್ಲಿ ಪ್ರಕರಣ ಆಗುವ ಮೊದಲು ರಾಯಚೂರಿನಲ್ಲಿ ಪ್ರಕರಣ ದಾಖಲಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಶೆಡ್ಯೂಲ್ 2 ರ ಆಸ್ತಿಯ ಬಗ್ಗೆ ನನ್ನ ತಾಯಿಯ ವಿರುದ್ಧ ಸಭಾಪತಿ

ಜಿನ್ನಿಂಗ್ ಆ್ಯಂಡ್ ಪ್ರೇಸ್ಸಿಂಗ್ ಫ್ಯಾಕ್ಟರಿಯವರು ಸಿವಿಲ್ ನ್ಯಾಯಾಲಯದಲ್ಲಿ ಓ. ಎಸ್. ನಂಬರ 55/1984 ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣ ಯಾವ ವರ್ಷದಿಂದ ನಡೆಯುತ್ತದೆ ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣವನ್ನು ನನ್ನ ಅಣ್ಣ, ನನ್ನ ತಾಯಿ ಮತ್ತು ಪ್ರತಿವಾದಿಯರ ವಿರುದ್ಧ ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ನಾನು ಸುಮಾರು 2-3 ವರ್ಷದ ಹಿಂದೆ ಬಂದಿರುತ್ತೇನೆ.

ವಾದ ಪತ್ರದ ಜೊತೆಗೆ ತೋರಿಸಿರುವ ವಂಶಾವಳಿಯಲ್ಲಿ ವಾದಿ ಮತ್ತು 2 ನೇ ಪ್ರತಿವಾದಿಯನ್ನು ಮಾತ್ರ ತೋರಿಸಿರುತ್ತಾರೆ ಎಂದರೆ ಸಾಕ್ಷಿದಾರು ನಾನು ಅವರ ಮಗಳು ಇರುತ್ತೇನೆ ಅಂತಾ ಹೇಳುತ್ತಾರೆ.

ನನ್ನ ತಾಯಿ ಜೀವಂತ ಇರುವಾಗ ಶೆಡ್ಯೂಲ್ -1 ರ ಆಸ್ತಿಯಲ್ಲಿ ಚಿಕ್ಕ ಅಂಗಡಿಯನ್ನು ಇಟ್ಟುಕೊಂಡು ಟೇಲರಿಂಗ್ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ಇಬ್ಬರು ಸಹೋದರರನ್ನು ಮತ್ತು ನನಗೆ ಓದಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಓದಿಸಿರುವುದಿಲ್ಲ ಅಂತಾ ಹೇಳುತ್ತಾರೆ. ಇಬ್ಬರು ಸಹೋದರರು ಕಾನ್ವೆಂಟನಲ್ಲಿ ಓದುತಿದ್ದರು ಎಂದರೆ ಸರಿ. ಇಬ್ಬರು ಶಾಲೆಗೆ ರಿಕ್ಷಾದಲ್ಲಿ ಹೋಗುತ್ತಿದ್ದರು ಎಂದರೆ ಸರಿ. ಇಬ್ಬರು ಸಹೋದರರ ಶಾಲಾ ವೆಚ್ಚ ಮತ್ತು ರಿಕ್ಷಾ ವೆಚ್ಚವನ್ನು ನನ್ನ ತಾಯಿ ಕೊಡುತ್ತಿದ್ದರು ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಬರುವ ಮೊದಲು ಈ ಪ್ರಕರಣ ನಡೆಯುತ್ತಿದ್ದ ಬಗ್ಗೆ ನನಗೆ ಗೊತ್ತಿತ್ತು. ದಾವ ಶೆಡ್ಯೂಲ್ -1 ಮತ್ತು 2 ಆಸ್ತಿಯನ್ನು ನನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಾಯಿಗೆ ಶಸ್ತ್ರಚಿಕಿತ್ಸೆಯಾಗಿತ್ತು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಆಕೆಯ ಕಾಲಿಗೆ ಹೊಡೆದಿದ್ದರಿಂದ ಶಸ್ತ್ರಚಿಕಿತ್ಸೆ ಆಗಿತ್ತು ಎಂದು ಹೇಳುತ್ತಾರೆ. ನನ್ನ ತಾಯಿಗೆ ಹೊಡೆದ ಬಗ್ಗೆ ಪ್ರಕರಣ ದಾಖಲಾಗಿರಲಿಲ್ಲ.

ವಾದಿಯ ಮಾತು ಕೇಳಿ ನನ್ನ ತಾಯಿಗೆ ಹೊಡೆದಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವಾಗ ಹೊಡೆದಿದ್ದರು ನನಗೆ ನೆನಪಿಲ್ಲ. ಪ್ರತಿವಾದಿ ನಂಬರ 3 ಮತ್ತು 4 ಇಂಜಿನಿಯರಿಂಗ್ ಮುಗಿದ ನಂತರ ಬೆಂಗಳೂರಿನಲ್ಲಿ ಪಿ. ಜಿ. ಯಲ್ಲಿ ಇರುತ್ತಿದ್ದರು ಎಂದರೆ ಸರಿ. ಅವರಿಬ್ಬರು ಕೆಲಸ ಸಿಕ್ಕ ನಂತರ ಬೆಂಗಳೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನನ್ನ ತಾಯಿಗೆ ಇರಲು ಅನುಕೂಲವಾಗಲೆಂದು ಬಾಡಿಗೆ ಮನೆ ಮಾಡಿದ್ದರು ಎಂದು ಹೇಳುತ್ತಾರೆ . ನನ್ನ ತಾಯಿ ಬೆಂಗಳೂರಿಗೆ ಹೋದರೆ ಪ್ರತಿವಾದಿ ನಂಬರ 3 ಮತ್ತು 4 ರವರ ಜೊತೆ ಇರುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪ್ರತಿವಾದಿ ನಂಬರ 2 ಮತ್ತು 8 ರಾಯಚೂರಿನಲ್ಲಿ ಇರುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಬೆಂಗಳೂರಿಗೆ ಹೋದಾಗ ಪ್ರತಿವಾದಿ ನಂಬರ 3 ಮತ್ತು 4 ಅವರ ಚಿಕಿತ್ಸೆ ವೆಚ್ಚವನ್ನು ನೋಡಿಕೊಳ್ಳತ್ತಿದ್ದರು ಎಂದರೆ ಸರಿ. ವಾದಿ ಬೆಂಗಳೂರಿನಲ್ಲಿ ತನ್ನ ನಿವೃತ್ತಿವರೆಗೊ ಇದ್ದು, ಈಗಲೂ ಬೆಂಗಳೂರಿನಲ್ಲಿ ಇರುತ್ತಾರೆ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಮಯ ಅವಕಾಶ ಕೋರಿದ್ದರಿಂದ ಮುಂದಿನ ಪಾಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.)

**ದಿನಾಂಕಃ 11-07-2022 ರಂದು ಮಧ್ಯಾಹ್ನ 03 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ. ಎ. ಜಿ., ಮಾನ್ಯ ವಕೀಲರಿಂದ 2,3,4,8 ಮತ್ತು 9 ನೇ ಪ್ರತಿವಾದಿಗಳ ಪರವಾಗಿಃ-***

ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರ 6 ರಲ್ಲಿ ಬರೆದಂತೆ ರಾಜಿ ಮಾಡಿಕೊಳ್ಳುತ್ತಾರೆ ಅಂತಾ ಈ ಪ್ರಕರಣದಲ್ಲಿ ನಾನು ಬಂದಿರಲಿಲ್ಲ ಅಂತಾ ಬರೆದಿದ್ದು ಸದರಿ ರಾಜಿ ವಿಚಾರ ಸುಮಾರು 3 ವರ್ಷದ ಹಿಂದ ನಡೆದಿತ್ತು. ಸದರಿ

ರಾಜಿ ವಿಚಾರ ಸಮಯದಲ್ಲಿ ವಾದಿ, ಪ್ರತಿವಾದಿ ನಂಬರ 3, 4, 8 ಮತ್ತು 2 ಇದ್ದರು. ಸದರಿ ರಾಜಿ ಮಾತುಕತೆ ಪ್ರೀಯಾ ಹೊಟೇಲ್ ನಲ್ಲಿ ನಡೆದಿತ್ತು. ಸದರಿ ರಾಜಿ ನಂತರ ಪ್ರತಿವಾದಿ ನಂಬರ 3 ಮತ್ತು 4 ಬಾಂಡ ಪೇಪರ ಮೇಲೆ ರಾಜಿ ಪತ್ರ ಬರೆದರು 2 ನೇ ಪ್ರತಿವಾದಿಗೆ ಆ ಸಮಯದಲ್ಲಿ ನಡೆದಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ರಾಜಿ ಮಾತುಕತೆ ನಂತರ ನಾನು, ಪ್ರತಿವಾದಿ 3 ಮತ್ತು 4 ಶ್ರೀ ನೂರ್ ಮಹ್ಮಮದ ವಕೀಲರ ಹತ್ತಿರ ಹೋದೆವು. ಅಲ್ಲಿ ಪ್ರತಿವಾದಿ ನಂಬರ 4 ನನಗೆ ನಿನಗೆ ಆಸ್ತಿ ಬೇಕಾದರೆ ಕೊರ್ಟಿಗೆ ಹೋಗು ಎಂದು ಹೇಳಿದರು. ಪ್ರತಿವಾದಿ ನಂಬರ 3 ಮತ್ತು 4 ಬರೆದ ರಾಜಿ ಪತ್ರದ ಪ್ರತಿ ನನ್ನ ಬಳಿ ಇರುವುದಿಲ್ಲ . ಈಗ ನಾನು ಹೇಳಿದ ರಾಜಿ ಪತ್ರವನ್ನು ಪ್ರತಿವಾದಿ ನಂಬರ 3 ಮತ್ತು 4 ಬಾಂಡ ಪೇಪರ್ ಬರೆದ ವಿಷಯ ಹಾಗೂ ಶ್ರೀ ನೂರ್ ಮಹ್ಮಮದ ವಕೀಲ ಹತ್ತಿರ ಹೋದ ವಿಷಯವನ್ನು ನಾನು ನಮ್ಮ ವಕೀಲರ ಮುಂದೆ ಹೇಳಿದ್ದು ಅದನ್ನು ನಮ್ಮ ವಕೀಲರು ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈಗ ನಾನು ಹೇಳಿದಂತೆ ರಾಜಿ ಪತ್ರವನ್ನು ಪ್ರತಿವಾದಿ ನಂಬರ 3 ಮತ್ತು 4 ಬರೆದಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂಬರ 8 ಮಾನಸಿಕ ರೋಗಿಯಾಗಿದ್ದರಿಂದ ಅವರಿಗೆ ದಾವ ಆಸ್ತಿ ಒಟ್ಟು ಕುಟುಂಬದ ಆಸ್ತಿ ಇದೆ ಎನ್ನುವ ವಿಚಾರ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು 2 ನೇ ಪ್ರತಿವಾದಿಗೆ ಮನೆಗೆ ಒಬ್ಬನೆ ಗಂಡು ಮಗ ಇರುತ್ತಾನೆ ಎಂದರೆ ಸರಿ. 2 ನೇ ಪ್ರತಿವಾದಿಯ ಹೆಂಡತಿ ಬಿಟ್ಟು ಹೋದಾಗ ಪ್ರತಿವಾದಿ ನಂಬರ 3 ಮತ್ತು 4 ಮತ್ತು 8 ಇನ್ನೂ ಚಿಕ್ಕವರು ಇದ್ದರು ಎಂದರೆ ಸರಿ. 4 ನೇ ಪ್ರತಿವಾದಿ ಒಂದು ತಿಂಗಳ ಮಗು ಇದ್ದರು ಎಂದರೆ ಸರಿ. 3 ಮಕ್ಕಳನ್ನು 2 ನೇ ಪ್ರತಿವಾದಿ ಮತ್ತು ನನ್ನ ತಾಯಿ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಾಯಿ ಮಾತ್ರ ನೋಡಿಕೊಂಡಿರುತ್ತಾರೆ ಅಂತಾ ಹೇಳುತ್ತಾರೆ. ನನ್ನ ತಾಯಿ 3 ಮಕ್ಕಳನ್ನು ತುಂಬಾ ಪ್ರೀತಿಯಿಂದ ನೋಡಿಕೊಂಡಿದ್ದರು ಎಂದರೆ ಸರಿ. 3 ಜನ ಮಕ್ಕಳನ್ನು 2 ನೇ ಪ್ರತಿವಾದಿಯ ಹೆಂಡತಿ ಬಿಟ್ಟು ಹೋದಾಗಿನಿಂದ ನನ್ನ ತಾಯಿ ಮರಣ ಹೊಂದುವವರಗೂ ನನ್ನ ತಾಯಿ ಜೊತೆ ಇದ್ದರು ಎಂದರೆ ಸರಿ. ನನ್ನ

ತಾಯಿಯನ್ನು ಪ್ರತಿವಾದಿ ನಂಬರ 3 ಮತ್ತು 4 ಚಿಕಿತ್ಸೆ ಕೊಡಿಸುತ್ತಿರುವುದರಿಂದ ನನ್ನ ತಾಯಿಗೆ ಪ್ರತಿವಾದಿ 3 ಮತ್ತು 4 ರವರ ಮೇಲೆ ವಿಶೇಷ ಪ್ರೀತಿ ಇತ್ತು ಎಂದರೆ ಸರಿ. ವಾದಿ ರಾಯಚೂರಿನಲ್ಲಿ ಬ್ಯಾಂಕನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವಾದಿ ರಾಯಚೂರಿನಲ್ಲಿ ವಾಸವಿ ನಗರದಲ್ಲಿ ಪ್ರತಿವಾದಿ ನಂಬರ-2 ಖರೀದಿಸಿದ ಮನೆಯಲ್ಲಿ ವಾಸವಾಗಿದ್ದರು. ವಾದಿ ಎಸ್. ಬಿ. ಹೆಚ್. ಕಾಲೋನಿಯಲ್ಲಿ ಒಂದು ಮಾಡಿದ್ದರು ಎಂದರೆ ಸರಿ. ವಾದಿ ಎಸ್. ಬಿ. ಹೆಚ್. ಕಾಲೋನಿಯ ಮನೆಯಲ್ಲಿ ಇರುತ್ತಿದ್ದರು ಎಂದರೆ ಸರಿಯಲ್ಲ. ವಾದಿ 2 ನೇ ಪ್ರತಿವಾದಿಯ ಮನೆಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 3 ಮತ್ತು 4 ರವರ ಮೇಲೆ ನನ್ನ ತಾಯಿಗೆ ವಿಶೇಷ ಪ್ರೀತಿ ಇದ್ದುದ್ದರಿಂದ ಅವರಿಗೆ ನನ್ನ ತಾಯಿ ಶೆಡ್ಯೂಲ್ -2 ಆಸ್ತಿಯ ಭಾಗವನ್ನು ದಾನ ಪತ್ರದ ಮುಖಾಂತರ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿಗೆ ಖರೀದಿ ಯಾದ ಶೆಡ್ಯೂಲ್ -2 ಪ್ರಾಪರ್ಟಿ ನನ್ನ ತಾಯಿಯ ಸಂಪೂರ್ಣ ಮಾಲೀಕತ್ವದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ತಾಯಿ 30 ವರ್ಷದ ಹಿಂದೆ ಖರೀದಿಸಿರುತ್ತಾರೆ. ನಾನು ಖರೀದಿ ಪತ್ರವನ್ನು ನೋಡಿರುವುದಿಲ್ಲ ಸಾಕ್ಷಿದಾರರು ಮುಂದುವರೆದು ನನ್ನ ತಾಯಿ ನನಗೆ ಹೇಳಿರುತ್ತಾರೆ ಅಂತಾ ಹೇಳುತ್ತಾರೆ. ನನ್ನ ತಾಯಿ 60 ಸಾವಿರ ರೂ ಗೆ ಖರೀದಿಸಿರುತ್ತಾರೆ ಅಂತಾ ನನಗೆ ಹೇಳಿದ್ದರು. ಖರೀದಿ ಪತ್ರದಲ್ಲಿ ಖರೀದಿ ಹಣವನ್ನು ಯಾರು ಯಾರು ಕೊಟ್ಟಿರುತ್ತಾರೆ ಅನ್ನುವ ಬಗ್ಗೆ ಬರೆದಿರುವುದಿಲ್ಲ. ಸಾಕ್ಷಿದಾರರು ಸ್ವತಃ ಹೇಳುವುದೇನೆಂದರೆ ನನ್ನ ತಾಯಿ ಕೊಡಿಸಿಟ್ಟ ಹಣ ಅಂದರೆ ಮೀನಾ ಬಜಾರ್ ಅಂಗಡಿ ಬಾಡಿಗೆಯ ಹಣ ಹಾಗೂ ವಾದಿ ಕೊಟ್ಟ ಹಣದಿಂದ ಖರೀದಿಸಲಾಗಿರುತ್ತದೆ ಎಂದು ಹೇಳುತ್ತಾರೆ.

ಓ. ಎಸ್. ನಂಬರ 191/1982 ದಾವೆಯನ್ನು ವಾದಿ ಮತ್ತು 2 ನೇ ಪ್ರತಿವಾದಿ ಸೇರಿ ನನ್ನ ತಂದೆಯ ಸಹೋದರರ ಮೇಲೆ ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಾಯಿ ಸಾಕ್ಷಿ ನುಡಿದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಟೇಲರಿಂಗ್ ಕೆಲಸ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ಸಾಕ್ಷಿಯಲ್ಲಿ ತನಗೆ ಟೇಲರಿಂಗ್ ಕೆಲಸ ಗೊತ್ತಿತ್ತು ಎಂದು

ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ತನ್ನ ಟೇಲರಿಂಗ್ ಕೆಲಸ ಮತ್ತು ಅಂಗಡಿ ವ್ಯಾಪಾರದಿಂದ ಬಂದ ಹಣದಿಂದ ಶೆಡ್ಯೂಲ್-2 ಪ್ರಾಪರ್ಟಿ ಯನ್ನು ಖರೀದಿಸಿದ್ದರಿಂದ ಅದು ಅವರ ಸಂಪೂರ್ಣ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಶೆಡ್ಯೂಲ್ -2 ಆಸ್ತಿಯಲ್ಲಿ ಯಾರ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ನನ್ನ ತಾಯಿಯನ್ನು ಬೆದರಿಸಿ ದಾನ ಪತ್ರ ಬರೆಸಿಕೊಂಡಿರುತ್ತಾರೆ ಅಂತಾ ಹೇಳುತ್ತಿದ್ದು, ಆ ಬಗ್ಗೆ ವಕೀಲರ ಮುಂದೆ ಹೇಳಿ ತನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾಣೆಯಲ್ಲಿ ಬರೆಸಿರುತ್ತೀರಾ ಎಂದು ಕೇಳಿದ್ದ ಪ್ರಶ್ನೇಗೆ ಸಾಕ್ಷಿದಾರರು ನನ್ನ ತಾಯಿಯ ಮಾನ ಕಾಪಾಡಲು ಬರೆಸಿರುವುದಿಲ್ಲ ಅಂತಾ ಹೇಳತ್ತಾರೆ. 2 ನೇ ಪ್ರತಿವಾದಿ ನನ್ನ ತಾಯಿಯನ್ನು ಬೆದರಿಸಿರುತ್ತಾರೆ ಅಂತಾ ಹೇಳುತ್ತಾರೆ. 3 ಮತ್ತು 4 ಪ್ರತಿವಾದಿಯರು ನನ್ನ ತಾಯಿಯನ್ನು ಬೆದರಿಸಿರುವುದಿಲ್ಲ. 3 ಮತ್ತು 4 ನೇ ಪ್ರತಿವಾದಿಯರನ್ನು ನನ್ನ ತಾಯಿ ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ನನ್ನ ತಾಯಿ 3 ಮತ್ತು 4 ನೇ ಪ್ರತಿವಾದಿಯರಿಗೆ ಶೆಡ್ಯೂಲ್ -2 ಆಸ್ತಿಯಲ್ಲಿ ಕೊಟ್ಟ ಉಳಿದ ಆಸ್ತಿಯನ್ನು 8 ನೇ ಪ್ರತಿವಾದಿಯ ಹೆಸರಿಗೆ ಮೃತ್ಯು ಪತ್ರ ಬೆದಿದ್ದರು ಎಂದರೆ ಸರಿಯಲ್ಲ

ನನ್ನ ತಾಯಿ ತನ್ನ ಜೀವಿತಾವಧಿಯಲ್ಲಿ ಈ ಪ್ರಕರಣದ ಪ್ರತಿವಾದ ಪತ್ರ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ಅವರನ್ನು ಬೆದರಿಸಿ ಪ್ರತಿವಾದಿ ಪತ್ರ ಬರೆಸಿರುತ್ತಾರೆ ಅಂತಾ ಹೇಳುತ್ತಾರೆ. ನನ್ನ ತಾಯಿಯನ್ನು ಬೆದರಿಸಿ ಪ್ರತಿವಾದ ಪತ್ರ ದಾಖಲಿಸಿದ ಬಗ್ಗೆ ನಾನು ನನ್ನ ಪ್ರತಿವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವುದಿಲ್ಲ. ನನ್ನ ತಾಯಿ ತನ್ನ ಪ್ರತಿವಾದ ಪತ್ರದಲ್ಲಿ ಶೆಡ್ಯೂಲ್ -2 ಆಸ್ತಿಯ ಭಾಗವನ್ನು ಪ್ರತಿವಾದ 3 ಮತ್ತು 4 ರವರಿಗೆ ದಾನ ಪತ್ರದ ಮುಖಾಂತರ ಕೊಟ್ಟಿರುತ್ತೇನೆ ಅಂತಾ ಬರೆದಿತ್ತಾರೆ ಎಂದರೆ ಸಾಕ್ಷಿದಾರರು ಅವರನ್ನು ಬೆದರಿಸಿ ಹಾಗೇ ಬರೆಸಿದ್ದಾರೆ ಅಂತಾ ಹೇಳುತ್ತಾರೆ. ನನ್ನ ತಾಯಿಯನ್ನು ಬೆದರಿಕೆ ಬರೆಸಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ವಕೀಲರಿಗೆ ಹೇಳಿ ಬರೆಸಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. 3 ಮತ್ತು

4 ನೇ ಪ್ರತಿವಾಯರು ನನ್ನ ತಾಯಿಯ ಕಣ್ಣಿನ ಶಸ್ತ್ರಾ ಚಿಕಿತ್ಸೆ ಮಾಡಿಸಿರುತ್ತಾರೆ ಎಂದರೆ ಸರಿ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಮಯ ಅವಕಾಶ ಕೋರಿದ್ದು ಸಮಯ ಅವಕಾಶವನ್ನು ನೀಡಲಾಯಿತು.)

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**